# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರ ಕಛೇರಿ ಕೆಂಪೇಗೌಡನಗರ ಉಪವಿಭಾಗ,
## ಬೃ.ಬೆಂ.ಮ.ಪಾಲಿಕೆ ಹೆಚ್. ಸಿದ್ದಯ್ಯ ರಸ್ತೆ, ಬೆಂಗಳೂರು

ಸಂಖ್ಯೆ:ಸ.ಇಂ/ವಾ-118/ಹೊ-171/ವಾರ್ಡ್‌ಸಭೆ/2022-23 ದಿನಾಂಕ: 17/9/22

### ವಾರ್ಡ್ -118ರ ವಾರ್ಡ್ ಸಭೆಯ ನಡವಳಿ

ದಿನಾಂಕ:17-09-2022 ರಂದು ಕೆಂಪೇಗೌಡನಗರ ಉಪವಿಭಾಗ ವಾರ್ಡ್-118 ಹೊಸ ಸಂಖ್ಯೆ: 171 ರ ವಾರ್ಡ್ ಕಛೇರಿಯಲ್ಲಿ ಶ್ರೀ.ಬೀಮಶಂಕರ್, ಕಂದಾಯ ಅಧಿಕಾರಿ ಚಿಕ್ಕಪೇಟೆ ವಾರ್ಡ್-118 ಹೊಸ ಸಂಖ್ಯೆ:171 ರ ನೋಡಲ್ ಅಧಿಕಾರಿಯವರ ಅಧ್ಯಕ್ಷತೆಯಲ್ಲಿ ನಡೆದ ವಾರ್ಡ್ ಸಮಿತಿ ಸಭಾ ನಡವಳಿಗಳು.

ಹಾಜರಿದವರು:-

| ಕ್ರ ಸಂ. | ಹೆಸರು | ಹುದ್ದೆ | ಮೊಬೈಲ್ ಸಂಖ್ಯೆ |
|---|---|---|---|
| 1 | ಶ್ರೀ.ಬೀಮಶಂಕರ್ | ನೋಡಲ್ ಅಧಿಕಾರಿಗಳು | 9480683063 |
| 2 | ಶ್ರೀ.ಕೆ.ಎಸ್.ವಿಜಯ್‌ಕುಮಾರ್ | ಕಾರ್ಯದರ್ಶಿ ಹಾಗೂ ಸಹಾಯಕ ಅಭಿಯಂತರರು ವಾರ್ಡ್ ಸಂಖ್ಯೆ:118 | 9480688118 |
| 3 | ಶ್ರೀ.ಆರ್.ವೀರಯ್ಯ | ಕಿರಿಯ ಆರೋಗ್ಯ ಪರಿವೀಕ್ಷಕರು | 9844859560 |
| 4 | ಶ್ರೀ.ಎಸ್.ಕುಮಾರ್‌ವೇಲು | ಹಿರಿಯ ಆರೋಗ್ಯ ಪರಿವೀಕ್ಷಕರು | 9480688745 |
| 5 | ಶ್ರೀ. ರವಿಕುಮಾರ್ | ಎ.ಎಸ್.ಐ ವಿ.ವಿ.ಪುರಂ ಸಂಚಾರ | 888010966 |
| 6 | ಶ್ರೀ.ಟಿ.ಕೆ.ಸಂತೋಷ್ | ಸ್ಥಳೀಯರು | 9880177568 |
| 7 | ಶ್ರೀ.ಜೈ ಗಣೇಶ್ | ಸ್ಥಳೀಯರು | 8892857167 |
| 8 | ಶ್ರೀ.ರವಿ | ಸ್ಥಳೀಯರು | 9901051478 |
| 9 | ಶ್ರೀ.ಮುನಿಯನ್ | ಸ್ಥಳೀಯರು | 8090600382 |
| 10 | ಶ್ರೀ.ರಮೇಶ್ | ಸ್ಥಳೀಯರು | 9900494522 |
| 11 | ಶ್ರೀ.ದಿನೇಶ್ | ಸ್ಥಳೀಯರು | 8660373405 |
| 12 | ಶ್ರೀ.ಪ್ರಶಾಂತ್.ಕೆ | ಸ್ಥಳೀಯರು | 9742704773 |
| 13 | ಶ್ರೀ.ಮುದನ್ ರಾಯ್ | ಸ್ಥಳೀಯರು | 8310200679 |
| 14 | ಶ್ರೀ.ಶ್ರೀಲಕ್ಷ್ಮೀ | ಸ್ಥಳೀಯರು | 8095060290 |
| 15 | ಶ್ರೀ.ವರಲಕ್ಷ್ಮೀ | ಸ್ಲಂ ಮಹಿಳಾ ಸಂಘಟನೆ | 7349492478 |
| 16 | ಶ್ರೀಮತಿ. ಸುಜಾತ | ಸ್ಲಂ ಮಹಿಳಾ ಸಂಘಟನೆ | 9008036771 |
| 17 | ಶ್ರೀಮತಿ. ಕೌಸಲ್ಯ.ಎಂ | ಸ್ಲಂ ಮಹಿಳಾ ಸಂಘಟನೆ | 9731509704 |

ಮಾನ್ಯ ಅಧ್ಯಕ್ಷರು, ಮೇಲ್ಕಂಡ ಎಲ್ಲರನ್ನು ಸ್ವಾಗತದೊಂದಿಗೆ ಪರಸ್ಪರ ಪರಿಚಯ ಮಾಡಿಕೊಳ್ಳಲು ತಿಳಿಸುತ್ತಾ ಸಭೆಯನ್ನು ಪ್ರಾರಂಭಿಸಲಾಯಿತು.

Scanned with CamScanner

**ಚರ್ಚಿಸಲಾದ ವಿಷಯಗಳು:-**

ಸ್ಥಳೀಯರು ಮಾತನಾಡಿ, ಹೆಚ್.ಸಿದ್ಧಯ್ಯ ರಸ್ತೆಯ ರೆಫರಲ್ ಆಸ್ಪತ್ರೆಯ ಮುಂಭಾಗ ಹಾ... ಸುತ್ತಮುತ್ತಲಿನಲ್ಲಿ ಅನೇಕ ವಾಹನಗಳು ನಿಂತಿದ್ದು, ಸದರಿ ವಾಹನಗಳನ್ನು ತೆರವುಗೊಳಿಸಲು ದಿನಾಂಕವನ್ನು ನಿಗಧಿಪಡಿಸುವಂತೆ ಕೋರಿದರು. ಈ ವಿಷಯವಾಗಿ ನೋಡಲ್ ಅಧಿಕಾರಿಗಳು ಸಂಬಂಧಿಸಿದ ಪೋಲಿಸ್ ಇಲಾಖೆಗೆ ಪತ್ರ ಬರೆಯುವಂತೆ ಸಹಾಯಕ ಅಭಿಯಂತರರಿಗೆ ಸೂಚಿಸಿದರು.

ಸ್ಲಂ ಮಹಿಳಾ ಸಂಘಟನೆಯ ಕಳೆದು 3 ವರ್ಷಗಳಿಂದ ರಾಮಣ್ಣ ಗಾರ್ಡನ್, ವಿನೋಭಾನಗರ ಮತ್ತು ಗುರುಪ್ಪ ಗಾರ್ಡನ್ ಏರಿಯಾದಲ್ಲಿ ಕೆಲಸ ಮಾಡುತ್ತಿದ್ದೇವೆ, ಈ ಏರಿಯಾಗಳಲ್ಲಿ ಅನೇಕ ಸಮಸ್ಯೆಗಳಿವೆ, ಅಂದರೆ ಚರಂಡಿ, ಬೀದಿ ದೀಪ, ಕುಡಿಯುವ ನೀರಿನ ಸಮಸ್ಯೆ ಮತ್ತು ಸಾರ್ವಜನಿಕ ಶೌಚಾಲಯದ ಸಮಸ್ಯೆಗಳು ಇರುತ್ತದೆ. ಇದರ ವಿಷಯವಾಗಿ ಕಳೆದು ಸಭೆಯಲ್ಲಿ ತಮ್ಮ ಬಳಿ ಕೆಲವೊಂದು ವಿಷಯಗಳನ್ನು ಚರ್ಚೆ ಮಾಡಿರುತ್ತೇನೆ. ಅದರಲ್ಲಿ ಕೆಲವೊಂದು ಸಮಸ್ಯೆಗಳನ್ನು ಚರ್ಚೆ ಮಾಡಿರುತ್ತೇವೆ. ಆದರೆ ಅದರಲ್ಲಿ ಒಂದು ಕೆಲಸವೂ ಆಗಿರುವುದಿಲ್ಲ, ದಯವಿಟ್ಟು ಅದನ್ನು ಪರಿಹರಿಸಬೇಕಾಗಿಯೂ ಅದಲದೆ ಈ ಸಭೆಯಲ್ಲಿ ಕೆಲವೊಂದು ಸಮಸ್ಯೆಗಳ ಪಟ್ಟಿ ಮಾಡಿರುತ್ತೇವೆ. ಅದನ್ನು ಪರಿಹರಿಸಬೇಕಾಗಿಯೂ ಕೇಳಿಕೊಳ್ಳುತ್ತೇವೆ.

1. ವಿನೋಭನಗರ, ರಾಮಣ್ಣ ಗಾರ್ಡನ್ ಏರಿಯಾದಲ್ಲಿರುವ ಸಾರ್ವಜನಿಕ ಶೌಚಾಲಯದಲ್ಲಿ ನೀರಿನ ಸಮಸ್ಯೆ ಇದ್ದು, ಅದು ಬಳಸಲು ಶುದ್ಧವಾಗಿಲ್ಲ, ಅಲ್ಲಿನ ನೀರು ಹೊರಗೆ ಹರಿದು ಬರುತ್ತಿದೆ. ಇದರಿಂದ ಅಕ್ಕಪಕ್ಕದ ಮನೆಯವರಿಗೆ ಆರೋಗ್ಯದ ತೊಂದರೆ ಉಂಟಾಗಿದೆ ವಾರಕೊಮ್ಮೆ ಸ್ಯಾನಿಟೈಜ್ ಮಾಡಬೇಕಾಗಿ ಕೇಳಿಕೊಳ್ಳುತ್ತೇವೆ.
2. ಕಳೆದ ಸಲ ಮಳೆ ಬಂದಾಗ ಹಲವಾರ ಮನೆಯೊಳಗೆ ಮಳೆ ನೀರು ನುಗ್ಗಿದ್ದು, ಅನೇಕ ಮನಗಳಲ್ಲಿ ಹಾನಿಯುಂಟಾಗಿದೆ. ಆದರೆ ಯಾವ ಅಧಿಕಾರಿಗಳು ಬಂದು ಅಲ್ಲಿನ ಪರಿಸ್ಥಿತಿಯನ್ನು ಗಮನಿಸಿರುವುದಿಲ್ಲ. ದಯವಿಟ್ಟು ಮುಂದೆ ಆ ರೀತಿಯ ಆ ಹಾನಿಯಾಗದಂತೆ ಅಲ್ಲಿ ಅಧಿಕಾರಿಗಳು ಬರಬೇಕೆಂದು ಕೇಳಿಕೊಳ್ಳುತ್ತೇವೆ.
3. ಈ ವಾರ್ಡಿನಲ್ಲಿ ಬರುವ ರೇಷನ್ ಡಿಪೋನಲ್ಲಿ ಸರಿಯಾಗಿ ರೇಷನ್ ಕೊಡುತ್ತಿಲ್ಲ, ಇದಕ್ಕಾಗಿ ಒಂದು ಆದಾಲತ್ ಮಾಡಿಕೊಡಬೇಕಂದು ಕೇಳಿಕೊಳ್ಳುತ್ತೇವೆ.
4. ವಿನೋಭನಗರ ಮುಖ್ಯರಸ್ತೆಯಲ್ಲಿ ಹಳ್ಳಗಳನ್ನು ತೋಡಿದ್ದು, ಅಲ್ಲಿ ನೀರು ನಿಂತಿರುತ್ತದೆ. ಕೆಲವೊಮ್ಮೆ ನೀರು ಹೊರಗೆ ಬಂದು ಓಡಾಡಲು ಕಷ್ಟವಾಗುತ್ತದೆ. ದಯವಿಟ್ಟು ಅಲ್ಲಿನ ಹಳ್ಳಗಳನ್ನು ಕೂಡಲೇ ಮುಚ್ಚಬೇಕಾಗಿ ಕೇಳಿಕೊಳ್ಳುತ್ತೇವೆ.
5. ಈ ವಾರ್ಡಿನಲ್ಲಿರುವ ಬೀದಿ ದೀಪಗಳು ಆಗಾಗ ರಿಪೇರಿ ಆಗಿದ್ದು, ರಾತ್ರಿ ಸಮಯದಲ್ಲಿ ಅಲ್ಲಿನ ಹೆಣ್ಣು ಮಕ್ಕಳಿಗೆ ರಕ್ಷಣೆಯ ಸಮಸ್ಯೆಯಾಗಿರುತ್ತದೆ. ಅದುದರಿಂದ ಬೀದಿ ದೀಪಗಳನ್ನು ಸರಿ ಪಡಿಸಬೇಕಾಗಿ ಕೇಳಿಕೊಳ್ಳುತ್ತೇವೆ ಎಂದು ಸಭೆಯಲ್ಲಿ ತಿಳಿಸಿರುತ್ತಾರೆ.

ಸ್ಥಳೀಯರು ಮಾತನಾಡಿ ವಿನೋಭನಗರ ರಸ್ತೆಯಲ್ಲಿ ಮ್ಯಾನ್‌ಹೋಲ್‌ಗಳು ದುರಸ್ಥಿಯಾಗಿದ್ದು, ಕೂಡಲೇ ಇದನ್ನು ಸರಿಪಡಿಸಿಕೊಡಬೇಕೆಂದು ಕೋರಿರುತ್ತಾರೆ. ವಿನೋಭನಗರದ ಬೃಹತ್ ನೀರುಗಾಲುವೆ ಸ್ಲಾಬ್‌ಗಳನ್ನು ತೆಗೆದು ಸುಮಾರು ಒಂದು ವರ್ಷವಾದ್ದರೂ ಸಹ ಇದುವರೆಗೂ ಮುಚ್ಚಿರುವುದಿಲ್ಲ ಆದ್ದರಿಂದ ಕೂಡಲೇ ಬೃಹತ್ ನೀರುಗಾಲುವೆ ಸ್ಲಾಬ್‌ಗಳನ್ನು ಮುಚ್ಚಲು ಸಭೆಯಲ್ಲಿ ಕೋರಿರುತ್ತಾರೆ. ವಿನೋಭನಗರ ಮುಖ್ಯರಸ್ತೆ ಒಳಚರಂಡಿ ಪೈಪ್‌ಗಳನ್ನು ನೂತನವಾಗಿ ಅಳವಡಿಸಲು ಹಾಗೂ ಗುರುಪ್ಪ ಗಾರ್ಡನ್‌ನ ಮನೆಯ ಶೌಚಾಲಯಗಳನ್ನು ಒಳಚರಂಡಿಗೆ ಲಿಂಕ್ ಮಾಡಿಕೊಡಲು ಕೋರಿರುತ್ತಾರೆ.

Scanned with CamScanner

ನೋಡಲ್ ಅಧಿಕಾರಿಗಳು ಮಾತನಾಡುತ್ತಾ ಭಾರತ ಚುನಾವಣೆ ಆಯೋಗದ ನಿರ್ದೇಶನದಂತೆ ಮತದಾರರ ...ತಿನ ಚೀಟಿಗೆ ಆಧಾರ್ ಲಿಂಕ್ ಮಾಡುವ ಕುರಿತು (ನಮೂನೆ-6ಬಿ), ಆಧಾರ ಅಲ್ಲದೇ ಬೇರೆ ಗುರುತ್ತಿನ ...ಗಳಾದ ಆಹಾರ ಪಡಿತರ ಚೀಟಿ, ಚಾಲನೆ ಪರವಾನಿಗೆ ಹಾಗೂ ಇತ್ಯಾದಿಗಳನ್ನು ಲಿಂಕ್ ಮಾಡಲು ಅವಕಾಶವಿರುತ್ತದೆ ಎಂದು ತಿಳಿಸಿರುತ್ತಾರೆ. ಹಾಗೂ ಗುರುತಿನ ಚೀಟಿಯಲ್ಲಿ ಸ್ಥಳ ಬದಲಾವಣೆ ಇತ್ಯಾದಿಗಳನ್ನು ಅನ್‌ಲೈನ್ ಮುಖಾಂತರ ಬದಲು ಅವಕಾಶವಿರುತ್ತದೆ ಎಂದು ತಿಳಿಸಿರುತ್ತಾರೆ. ಬಿ.ಡಬ್ಲ್ಯೂ.ಎಸ್.ಎಸ್.ಬಿ ಹಾಗೂ ಪೊಲೀಸ್ ಇಲಾಖೆಗೆ ಮುಂಬರುವ ಸಭೆಗೆ ಹಾಜರಾಗುವಂತೆ ತಿಳಿಸಲು ಸಭೆಯ ಕಾರ್ಯದರ್ಶಿರವರಿಗೆ ಸೂಚಿಸಿರುತ್ತಾರೆ.

ಅಂತಿಮವಾಗಿ ಅಧ್ಯಕ್ಷರು ಮಾತನಾಡಿ ಸಾರ್ವಜನಿಕರ ದೂರುಗಳನ್ನು ಕೂಡಲೇ ಸ್ಪಂದಿಸಬೇಕೆಂದು ತಿಳಿಸಿರುತ್ತಾರೆ ಹಾಗೂ ಮುಂದಿನ ಸಭೆಗೆ ಕಡ್ಡಾಯವಾಗಿ ಎಲ್ಲಾ ಅಧಿಕಾರಿಗಳಿಗೆ ವಾರ್ಡ್ ಸಮಿತಿ ಸಭೆಗೆ ಸಮಯಕ್ಕೆ ಸರಿಯಾಗಿ ಹಾಜರಾಗುವಂತೆ ಸೂಚಿಸಿ, ತಪ್ಪಿದಲ್ಲಿ ಹಾಜರಾಗದ ಅಧಿಕಾರಿಗಳಿಗೆ ನೋಟೀಸ್ ಜಾರಿ ಮಾಡಲು ತಿಳಿಸಿರುತ್ತಾರೆ.ಹಾಜರಿದ್ದ ಅಧಿಕಾರಿಗಳಿಗೆ ಸಮನ್ವಯ ಸಾಧಿಸಿಕೊಂಡು ಸಕಾಲದಲ್ಲಿ ಸಾರ್ವಜನಿಕರ ಕುಂದುಕೊರತೆಗಳಿಗೆ ಸ್ಪಂದಿಸಿ ಪರಿಹರಿಸಲು ಸಹಕಾರ ನೀಡುವಂತೆ ಕೋರುತ್ತಾ, ಸಭೆಗೆ ಹಾಜರಿದ್ದ ಎಲ್ಲಾರಿಗೂ ವಂದನೆಗಳನ್ನು ಅರ್ಪಿಸುತ್ತಾ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

17/9/22
ಕಾರ್ಯದರ್ಶಿಗಳು ಹಾಗೂ
ಸಹಾಯಕ ಅಭಿಯಂತರರು
ವಾರ್ಡ್ –171 ಸುಧಾಮನಗರ

17/9/22
ನೋಡಲ್ ಅಧಿಕಾರಿಗಳು
ವಾರ್ಡ್ ಸಂಖ್ಯೆ: 171

Scanned with CamScanner